ಹಾಗೆ ನೋಡಿದರೆ, ಹಾಸ್ಯದ ಅಭಿವ್ಯಕ್ತಿಯನ್ನು ಯಥೇಚ್ಛವಾಗಿ ಬಳಸಿಕೊಂಡಿದ್ದೆಂದರೆ ನಮ್ಮ ಪ್ರದರ್ಶನ ಕಲೆಗಳೇ. ನಾಟಕ, ಯಕ್ಷಗಾನ, ಸರ್ಕಸ್, ಜಾದೂ, ಸಿನಿಮಾ – ಹೀಗೆ ದೃಶ್ಯಮಾಧ್ಯಮದ ಹಲವು ಪ್ರಕಾರಗಳಲ್ಲಿ ಹಾಸ್ಯವೇ ಪ್ರಾತಿನಿಧಿಕ ಸ್ಥಾನ ಪಡೆದ ಉದಾಹರಣೆಗಳು ಸಾಕಷ್ಟಿವೆ. ಮನುಷ್ಯರ ಭಾವಾಭಿನಯ ಮುನ್ನೆಲೆಯಲ್ಲಿ ಇಲ್ಲದ ಗೊಂಬೆಯಾಟ, ಕಾರ್ಟೂನು ಇತ್ಯಾದಿಗಳನ್ನೂ ನಾವಿಲ್ಲಿ ಪರಿಗಣಿಸಬಹುದು. ಹಾಗಾದರೆ, ಗ್ರಂಥಗಳಲ್ಲಿ ಅದೃಶ್ಯವಾಗಿದ್ದು, ಪ್ರದರ್ಶನಗೊಂಡಾಗ ಮಾತ್ರ ಹೊಮ್ಮುವುದು ಹಾಸ್ಯದ ಮೂಲಗುಣವಾಗಿರಬಹುದೇ?

ಓದುವಾಗ ಗಂಭೀರ ಎನ್ನಿಸಿದ್ದ ಲಂಕೇಶರ 'ಪೊಲೀಸರಿದ್ದಾರೆ ಎಚ್ಚರಿಕೆ' ನಾಟಕ ರಂಗದ ಮೇಲೆ ನಗೆಯ ಹೊನಲನ್ನೇ ಹರಿಸಿತ್ತು. ಶೇಕ್ಸ್‌ಪಿಯರನ 'ಕಾಮಿಡಿ ಆಫ್ ಎರರ್ಸ್' ಆಗಲೀ 'ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್' ಆಗಲೀ ಮುದ್ರಣಕ್ಕಿಂತ ಪ್ರಯೋಗ ರೂಪದಲ್ಲೇ ಅಧಿಕ ಮನ್ನಣೆ ಪಡೆದವುಗಳು. ಇವನ್ನೆಲ್ಲ ನಾವು ನೆನಪಿಸಿಕೊಂಡಾಗ – 'ಆಗಿಕಂ ಭುವನಂ ಯಸ್ಯ ವಾಚಿಕಂ ಸರ್ವವಾಙ್ಮಯಂ' ಎನ್ನುವ ರಂಗಶಿವನನ್ನು ಬಣ್ಣಿಸುವ ಸಾಲಿನಂತೆ, ಹಾಸ್ಯವೂ ಕೂಡಾ ಅಕ್ಷರಗಳಿಗಿಂತ ಹೆಚ್ಚು ಆಂಗಿಕಾಭಿನಯ, ಮಾತಿನ ಶೈಲಿ, ವೇಷ ಭೂಷಣಗಳನ್ನೇ ನೆಚ್ಚಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇವುಗಳಲ್ಲಿ ನಾಟಕ, ಸಿನಿಮಾದಂಥ ಪ್ರಕಾರಗಳು ಪ್ರದರ್ಶನಕ್ಕಾಗಿಯೇ ರಚನೆಗೊಂಡಿದ್ದರೂ, ಅವು ದೃಶ್ಯಕ್ಕೆ ರೂಪಾಂತರಗೊಂಡಾಗ ಹಾಸ್ಯದ ಸಂವಹನಕ್ಕೆ ಸಿಗುವಷ್ಟು ನಮ್ಯತೆ ಮೂಲ ರೂಪದಲ್ಲಿ ದೊರೆಯಲಾರದು. (ಇಲ್ಲಿ ನಿರ್ದೇಶಕನ ಪರಿಕಲ್ಪನೆಯೂ ಅಷ್ಟೇ ಮುಖ್ಯವಾಗುತ್ತದೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ)

ಇನ್ನೊಂದು ವಿಚಾರ – ನಗುವಿನ ಆಯುಸ್ಸು ಬಹಳ ಕಮ್ಮಿ. ಉಳಿದ ಕೆಲವು ರಸಗಳಿಗಿರುವ ದೀರ್ಘ ತಾಳಿಕೆ ಹಾಗೂ ಬಾಳಿಕೆಗಳೆರಡೂ ಅದಕ್ಕಿಲ್ಲ. ಉದಾಹರಣೆಗೆ ಶೋಕವನ್ನೇ ತೆಗೆದುಕೊಳ್ಳಿ, ಅದು ನಿಧಾನವಾಗಿ ಇಂಗುತ್ತ ಪಸರಿಸಬಲ್ಲದು. ಶಾಶ್ವತವೂ ಸಾರ್ವತ್ರಿಕವೂ ಆಗುವ ಗುಣಸಾಧ್ಯತೆಗಳಿವೆ ಅದಕ್ಕೆ. ಹಾಸ್ಯ ಹಾಗಲ್ಲ. ಭಾವನೆಗಳ ಆಸ್ಫೋಟದಿಂದ ಒಮ್ಮೆಲೇ ಶೃಂಗಕ್ಕೇರಿ ಅದೇ ವೇಗದಲ್ಲಿ ಇಳಿದು ತಣ್ಣಗಾಗುವಂಥದ್ದು. ಯಾಕೆಂದರೆ ಹಾಸ್ಯವನ್ನು ಸವಿಯಲು ಮನುಷ್ಯನಿಗೆ ಒಂದು ವಿಶೇಷ ಮನಸ್ಥಿತಿ, ಸ್ವಸ್ಥ ಗಳಿಗೆ ಇತ್ಯಾದಿಗಳ ಅನುಕೂಲವಿರಬೇಕು. ಅದು ಆತನಿಗೆ ಎಲ್ಲ ಸಂದರ್ಭಕ್ಕೂ ದೀರ್ಘಕಾಲಕ್ಕೂ ಒದಗಿ ಬಂದಿರುವುದಿಲ್ಲ. 'ಜನರನ್ನು ಅಳಿಸುವುದು ಬಹಳ ಸುಲಭ, ನಗಿಸುವುದು ಕಷ್ಟ' ಎನ್ನುವ ಒಪ್ಪಿತ ಸಂಗತಿಯ ಹಿಂದೆ ಈ ಒಂದು ಕಾರಣವೂ ಇದೆ. ಹಾಗೆಯೇ, ವಿಷಯವೊಂದನ್ನು ತಮಾಷೆಯ ಮುಖೇನ ಹೇಳಿದ್ದರೂ ನಮ್ಮಲ್ಲಿ ಶಾಶ್ವತವಾಗಿ ಉಳಿಯುವುದು ಅದರಲ್ಲಿ ಅಡಕವಾಗಿರುವ ವ್ಯಂಗ್ಯ, ವಿಷಾದಗಳೇ ಹೊರತು ಹಾಸ್ಯದ ಸನ್ನಿವೇಶವಲ್ಲ. ಈ ಹಿಂದೆ ಹೆಸರಿಸಿದ ಸಾಹಿತಿಗಳೆಲ್ಲ ತಮ್ಮ ಕೃತಿಯನ್ನು ಕೇವಲ ಹಾಸ್ಯಕ್ಕಷ್ಟೇ ಸೀಮಿತಗೊಳಿಸಿದ್ದಿದ್ದರೆ ಅವು ಜನಮಾನಸದಲ್ಲಿ ಉಳಿಯುತ್ತಿರಲಿಲ್ಲ.

ಬಹುಶಃ ನಮ್ಮೆಲ್ಲ ಗ್ರಂಥಕಾರರ ಉದ್ದೇಶ ಓದುಗನಿಗೆ ಅನವರತವಾದ ಅನುಭೂತಿಯನ್ನು ಕಟ್ಟಿಕೊಡುವುದೇ ಹೊರತೂ ಕೆಲ ಹೊತ್ತಿನ ಸುಖ ನೀಡಿ ಮರೆಯಾಗುವುದಲ್ಲ. ನಗುವಿಗಿಂತಲೂ ಅವರಿಗೆ ಆನಂದವೇ ಮುಖ್ಯವೆನಿಸಿರಬಹುದು.

***

ಹಾಸ್ಯ ರಸದಲ್ಲಿ 'ಆತ್ಮಸ್ಥ' ಹಾಗೂ 'ಪರಸ್ಥ' ಎನ್ನುವ ಎರಡು ವಿಭಾಗಗಳಿರುವುದು ತಿಳಿದದ್ದೇ ಆಗಿದೆ. ತಾನೇ ಹಾಸ್ಯಕ್ಕೆ ಮೂಲವಾಗಿ ಇತರರನ್ನು ನಗಿಸುವುದು ಮೊದಲನೆಯ ವರ್ಗವಾದರೆ, ಹಾಸ್ಯಕ್ಕೀಡಾಗುವ ಬೇರೊಬ್ಬ ವ್ಯಕ್ತಿಯನ್ನು ನೋಡಿ ತಾವು ನಗುವುದು ಎರಡನೇ ಬಗೆ. ಯಾವುದೇ ದೃಶ್ಯಮಾಧ್ಯಮವನ್ನು ತೆಗೆದುಕೊಳ್ಳಿ, ಅಲ್ಲಿ ಹಾಸ್ಯಕ್ಕೆಂದೇ ಸೃಷ್ಟಿಸಲಾದ ಪಾತ್ರಗಳಲ್ಲಿ ಹೆಚ್ಚಿನವು ತನ್ನನ್ನೇ ತಾನು ಗೇಲಿ ಮಾಡಿಕೊಂಡು, ಶ್ರೋತೃಗಳಿಗೆ ಪರಸ್ಥ ಹಾಸ್ಯಾನುಭವ ನೀಡುವಂಥವೇ ಆಗಿರುತ್ತವೆ. ನಮ್ಮ ಮಿತ್ರರ ಬಳಗದಲ್ಲೋ ಕುಟುಂಬದಲ್ಲೋ ಹೀಗೆ ತಮ್ಮನ್ನೇ ಕುಚೇಷ್ಟೆಗೊಳಪಡಿಸಿಕೊಳ್ಳುವ ವ್ಯಕ್ತಿಗಳು ಅಪರೂಪಕ್ಕೆ ಸಿಗುತ್ತಾರೆ ಹಾಗೂ ಅವರೇ ಎಲ್ಲರ ಆಕರ್ಷಣೆಯ ಬಿಂದುವೂ ಆಗಿರುತ್ತಾರೆ. ಹಾಗೆಂದಮಾತ್ರಕ್ಕೆ, ತಾನೇ ಹಾಸ್ಯಕ್ಕೆ ತುತ್ತಾಗುವ ಸಂಗತಿ ಸಾಮಾನ್ಯದ್ದೇನಲ್ಲ.